ಕರ್ನಾಟಕದಲ್ಲಿ ನೇತ್ರದಾನದ ಅಭಿಯಾನ ತಕ್ಕಮಟ್ಟಿಗೆ ಜನರ ಗಮನ ಸೆಳೆದಿದ್ದರೆ ಅದಕ್ಕೆ ಕಾರಣ, ವರನಟ ರಾಜ್‌ಕುಮಾರ್. ನಾರಾಯಣ ನೇತ್ರಾಲಯದಲ್ಲಿನ 'ನೇತ್ರಧಾಮ'ದ ಉಗಮಕ್ಕೂ ಅವರೇ ಕಾರಣ.ಡಾ. ಕೆ. ಭುಜಂಗ ಶೆಟ್ಟಿ ಅವರು ಬೆಂಗಳೂರಿನ ಮಿಂಟೊ ಆಸ್ಪತ್ರೆಯಲ್ಲಿ ಎಂ.ಎಸ್. ಓದುತ್ತಿರುವಾಗ ನೇತ್ರದಾನಿಗಳ ಕೊರತೆಯಿತ್ತಂತೆ. ನಮ್ಮ ದೇಶದಲ್ಲಿ ಹಾಗೂ ರಾಜ್ಯದಲ್ಲಿ ಆಗ ನೇತ್ರದಾನಿಗಳು ತೀರಾ ಕಡಿಮೆಯಿದ್ದರು. ಮಿಂಟೊ ಆಸ್ಪತ್ರೆಯಲ್ಲಿ ಅಪರೂಪಕ್ಕೆ ಕಣ್ಣಿನ ಟ್ರಾನ್ಸ್‌ಪ್ಲಾಂಟ್ ಮಾಡುತ್ತಿದ್ದರು. ಅಲ್ಲಿಗೆ ಬರುತ್ತಿದ್ದ ಕಣ್ಣುಗಳೆಲ್ಲವೂ ಶ್ರೀಲಂಕಾದವು.

ಉಪಖಂಡ ಎಂದು ಕರೆಸಿಕೊಳ್ಳುವ, ಕೋಟ್ಯಂತರ ಮಂದಿ ಇರುವ ಭಾರತಕ್ಕೆ ಆ ಪುಟ್ಟ ದೇಶದಿಂದಲೇ ಕಣ್ಣುಗಳು ರವಾನೆಯಾಗುತ್ತಿದ್ದವು ಎನ್ನುವುದು ಆಶ್ಚರ್ಯವಾದರೂ ಸತ್ಯ. ಶ್ರೀಲಂಕಾದಲ್ಲಿ ಸಾಧ್ಯವಾಗಿರುವ ನೇತ್ರಕ್ರಾಂತಿಯನ್ನು ನಮ್ಮಲ್ಲೂ ಸಾಧ್ಯವಾಗಿಸಬೇಕು ಎನ್ನುವ ಭುಜಂಗಶೆಟ್ಟಿ ಅವರ ಆಶಯಕ್ಕೆ ಒತ್ತಾಸೆಯಾದುದು ರಾಜ್‌ಕುಮಾರ್.

ನೇತ್ರದಾನಕ್ಕೆ ರಾಜ್ ಅವರನ್ನು ರಾಯಭಾರಿಯಾಗಿಸಬೇಕೆಂಬ ಆಸೆಯಿಂದ ಅವರನ್ನು ಭುಜಂಗಶೆಟ್ಟಿ ಭೇಟಿಯಾದರಂತೆ. ವೈದ್ಯರ ಮಾತು ಕೇಳಿದ ರಾಜ್ ಅಚ್ಚರಿಯಿಂದ ಹೀಗೆ ಹೇಳಿದರಂತೆ:

''ನೇತ್ರದಾನ ಅಂದರೆ ಜೀವ ಇದ್ದಾಗಲೇ ಕಣ್ಣು ಕೊಡಬೇಕು ಅಂತ ನಾನಂದುಕೊಂಡಿದ್ದೆ. ಏನ್ ಮಹಾ ಬಿಡು, ಎರಡ್ ಕಣ್ಣಿದೆ ಅದರಲ್ಲಿ ಒಂದ್ ಕಣ್ಣನ್ನು ಕೊಟ್ಟುಬಿಡೋಣ ಅಂತ ನಿರ್ಧರಿಸಿದ್ದೆ. ಆದರೆ, ಸತ್ತ ಮೇಲೆ ಕಣ್ಣು ದಾನ ಮಾಡೋದು ಅಂದ್ರೆ ಯಾರ್ ತಾನೇ ಬೇಡ ಅಂತಾರೆ. ನೀವು ಮಾಡಹೊರಟಿರುವ ನೇತ್ರದಾನ ಅಭಿಯಾನ ಒಳ್ಳೆಯ ಕಾರ್ಯಕ್ರಮ. ಸತ್ತ ಮೇಲೆ ವ್ಯರ್ಥವಾಗುವ ಕಣ್ಣುಗಳನ್ನು ದಾನ ನೀಡುವುದೇ ಸರಿ. ಅವುಗಳನ್ನೇಕೆ ವೃಥಾ ಸುಡುವುದು ಅಥವಾ ಮಣ್ಣುಪಾಲು ಮಾಡುವುದು. ಅಂಧರಿಗೆ ದೃಷ್ಟಿ ಬರುವುದಾದರೆ ನಾವ್ಯಾಕೆ ನೇತ್ರದಾನ ಮಾಡಬಾರದು?''

'ನನ್ನಿಂದ ಏನಾಗಬೇಕು' ಅಂದು ರಾಜ್ ಕೇಳಿದಾಗ – ''ಏನಿಲ್ಲ ಅಣ್ಣಾ, ನಿಮ್ಮ ಹೆಸರನ್ನು ಈ ಅಭಿಯಾನದ ಜೊತೆಗೆ ಬಳಸಿಕೊಳ್ಳಲು ಅನುಮತಿ ಕೊಡಬೇಕು'' ಎಂದು ಡಾ. ಭುಜಂಗಶೆಟ್ಟರು ಕೋರಿಕೊಂಡರು. ಅದರ ಫಲವಾಗಿ 1994ರಲ್ಲಿ ' ಡಾ. ರಾಜ್‌ಕುಮಾರ್ ನೇತ್ರದಾನ ಕೇಂದ್ರ' ಆರಂಭವಾಯಿತು. ರಾಜ್ ಅವರೇ ಆ ಕೇಂದ್ರವನ್ನು ಉದ್ಘಾಟನೆ ಮಾಡಿದರು. ಆ ದಿನವೇ 'ನಾನು, ನನ್ನ ಹೆಂಡತಿ, ಮಕ್ಕಳು ಕಣ್ಣು ದಾನ ಮಾಡುತ್ತೇವೆ' ಅಂತ ಘೋಷಣೆ ಮಾಡಿದರು.

ರಾಜ್ ಸಾವಿನ ಸಂದರ್ಭದಲ್ಲಿ – ''ಅಪ್ಪಾಜಿ ಇನ್ನಿಲ್ಲ. ದಯವಿಟ್ಟು ಬಂದು ಅವರ ಆಸೆಯಂತೆ ಕಣ್ಣುಗಳನ್ನು ದಾನ ಪಡೆಯಿರಿ. 'ನಾನು ವೈದ್ಯರಿಗೆ ಪ್ರಾಮಿಸ್ ಮಾಡಿದ್ದೀನಿ. ಕಣ್ಣು ದಾನ ಮಾಡಲೇಬೇಕು' ಎಂದು ಆಗಾಗ ಅಪ್ಪಾಜಿ ಹೇಳುತ್ತಿದ್ದರು. ಅವರ ಕೊನೆ ಆಸೆ ಈಡೇರಿಸಿ'' ಎಂದು ಡಾ. ಭುಜಂಗಶೆಟ್ಟಿ ಅವರಿಗೆ ರಾಘವೇಂದ್ರ ರಾಜ್‌ಕುಮಾರ್ ಕರೆ ಮಾಡಿದರಂತೆ. ಹಾಗೆ ಪಡೆದ ಕಣ್ಣುಗಳು ಇಬ್ಬರು ಅಂಧರ ಪಾಲಿಗೆ ಈಗ ಬೆಳಕು.

''ರಾಜ್‌ಕುಮಾರ್ ಮೂಲಕ ನೇತ್ರದಾನದ ಬಗ್ಗೆ ರಾಜ್ಯದಲ್ಲಿ ಸಾಕಷ್ಟು ಜಾಗೃತಿ ಮೂಡಿತು. ಅವರಿಂದ ಶುರುವಾದ ನಮ್ಮ ಒಂದೇ ಕೇಂದ್ರದಲ್ಲಿ ಇಲ್ಲಿಯವರೆಗೂ 57,975 ಮಂದಿ ನೇತ್ರದಾನಕ್ಕೆ ಹೆಸರು ನೋಂದಾಯಿಸಿಕೊಂಡಿದ್ದಾರೆ. ಆ ಪೈಕಿ 13,194 ಮಂದಿ ಕಣ್ಣುಗಳನ್ನು ದಾನ ಮಾಡಿದ್ದಾರೆ. ರಾಜ್ಯದಲ್ಲಿ ವಾರ್ಷಿಕ ಅಂದಾಜು 4,500ರಿಂದ 5,000 ಕಣ್ಣುಗಳು ಸಂಗ್ರಹವಾಗುತ್ತವೆ. ಈ ಪೈಕಿ ರಾಜ್‌ಕುಮಾರ್ ನೇತ್ರದಾನ ಕೇಂದ್ರದ ಕೊಡುಗೆಯೇ ಅರ್ಧಕ್ಕಿಂತ ಹೆಚ್ಚು'' ಎನ್ನುತ್ತಾರೆ ಡಾ. ಭುಜಂಗಶೆಟ್ಟಿ.

ಪಾರ್ವತಮ್ಮ ಅವರು ತೀರಿಹೋದ ಬಳಿಕ ಅವರ ಕಣ್ಣುಗಳನ್ನೂ ದಾನ ಪಡೆಯಲಾಯಿತು. ರಾಜ್ ಅವರಂತೆಯೇ ಅವರ ಇಡೀ ಕುಟುಂಬ ನೇತ್ರದಾನದ ಸಂಕಲ್ಪ ಮಾಡಿದೆ. ಶಿವರಾಜ್‌ಕುಮಾರ್ ಅವರಂತೂ ದೇಹದಾನವನ್ನೇ ಮಾಡುವುದಾಗಿ ಘೋಷಿಸಿದ್ದಾರೆ. ನೇತ್ರದಾನದ ಸಂಕಲ್ಪ ತೊಟ್ಟಿರುವವರಲ್ಲಿ – ಕಾಂಗ್ರೆಸ್ ಪಕ್ಷದ ಮುಖಂಡ ರಾಹುಲ್ ಗಾಂಧಿ, ಪ್ರಸ್ತುತ ಮುಖ್ಯಮಂತ್ರಿ ಯಡಿಯೂರಪ್ಪ, ತೆಲುಗು ನಟ ಚಿರಂಜೀವಿ, ಮಾಜಿ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗಡೆ ಸೇರಿದ್ದಾರೆ.

## ನೇತ್ರದಾನ: ವಿಶ್ವಕ್ಕೆ ಶ್ರೀಲಂಕಾವೇ ಮಾದರಿ

ಇಡೀ ವಿಶ್ವದಲ್ಲಿ ಅತಿ ಹೆಚ್ಚು ನೇತ್ರದಾನ ಆಗುತ್ತಿರುವ ದೇಶವೆಂದರೆ ಅದು ಶ್ರೀಲಂಕಾ. ಅಲ್ಲಿ ಶೇಕಡ 70ಕ್ಕಿಂತ ಅಧಿಕ ಸಂಖ್ಯೆಯಲ್ಲಿ ಬೌದ್ಧ ಧರ್ಮದವರು ಇದ್ದಾರೆ. ಸತ್ತ ಮೇಲೆ ದೇಹದ ಯಾವುದಾದರೂ ಒಂದು ಅಂಗ ದಾನ ಮಾಡಿದರೆ ಮಾತ್ರ ಮೃತರಿಗೆ ಮೋಕ್ಷ ಸಿಗುತ್ತದೆ ಎಂಬ ನಂಬಿಕೆ ಬೌದ್ಧರಲ್ಲಿದೆ. ಹಾಗಾಗಿ, ಅಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಣ್ಣಿನ ದಾನ ಮಾಡುತ್ತಿದ್ದಾರೆ. ಬೌದ್ಧ ಧರ್ಮಕ್ಕೆ ಸೀಮಿತವಾಗಿದ್ದ ನೇತ್ರದಾನ ಕಾರ್ಯ ಇಂದು ಅಲ್ಲಿ ಎಲ್ಲ ಧರ್ಮದವರಿಗೂ ವಿಸ್ತರಿಸಿದೆ. ಹೀಗಾಗಿಯೇ ಇಡೀ ವಿಶ್ವಕ್ಕೆ ಶ್ರೀಲಂಕಾದಿಂದ ಕಣ್ಣುಗಳನ್ನು ಉಚಿತವಾಗಿ ರವಾನೆ ಮಾಡಲಾಗುತ್ತಿದೆ.

ಶ್ರೀಲಂಕಾ ಪುಟ್ಟ ದೇಶ. ಭಾರತ ದೊಡ್ಡ ದೇಶ. ಅಲ್ಲಿ ನಂಬಿಕೆ ಮೇಲೆ ಶುರುವಾದ ನೇತ್ರದಾನ ಪ್ರಕ್ರಿಯೆ ಪ್ರಸ್ತುತ ಮಾನವೀಯ ಕಾರ್ಯವಾಗಿ ರೂಪ ತಳೆದಿದೆ.

